# ಹಿರಿಯ ಶ್ರೇಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ
# ಗೌರಿಬಿದನೂರು

## ಸಿ.ಸಿ. ಸಂಖ್ಯೆ 182/2020

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ಎನ್.ವಿ. ಅಶ್ವಥಪ್ಪ | ಸಿ.ಡಬ್ಲ್ಯು | : | 1 |
| ತಂದೆ / ಗಂಡನ ಹೆಸರು | : | ಲೇಟ್ ವೆಂಕಟರಮಣಪ್ಪ | ಪಿ.ಡಬ್ಲ್ಯು | : | 1 |
| ವಯಸ್ಸು | : | 55 ವರ್ಷ | ಪ್ರಮಾಣೀಕರಿಸಿದ ದಿನಾಂಕ | : | 20.08.2025 |
| ವೃತ್ತಿ | : | ವ್ಯವಸಾಯ | | | |
| ವಾಸಸ್ಥಳ | : | ಎಂ. ನಾಗೇನಹಳ್ಳಿ | | | |

ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ

ಚಾಸಾ-2 ಮತ್ತು 4 ನನ್ನ ತಮ್ಮನ ಮಕ್ಕಳು, ಚಾಸಾ-3 ನನ್ನ ತಮ್ಮ, ಚಾಸಾ-5 ರಿಂದ 7, ಮತ್ತು 9 ನಮ್ಮ ಊರಿನವರೇ ಆಗಿದ್ದಾರೆ, ಚಾಸಾ-8 ಮತ್ತು 10 ನನಗೆ ಪರಿಚಯಸ್ಥರು. ಆರೋಪಿತರು ಸಹ ನನಗೆ ಪರಿಚಯಸ್ಥರು ಅವರು ನಮ್ಮ ಊರಿನವರೇ ಆಗಿದ್ದಾರೆ.

ಆರೋಪಿಗಳಿಗೂ ನಮಗೂ ಯಾವುದೇ ಗಲಾಟೆಯಾಗಿಲ್ಲ. ನಾನು ಆರೋಪಿಗಳ ವಿರುದ್ಧ ಪೋಲಿಸರಿಗೆ ಯಾವುದೇ ದೂರು ನೀಡಿಲ್ಲ. ಆರೋಪಿಗಳಿಗೂ ನಮಗೂ ಬಾಯಿ ಮಾತಿನಲ್ಲಿ ಜಗಳವಾಗಿರುತ್ತದೆ ಅಷ್ಟೆ.

ಸಾಕ್ಷಿಗೆ ದಿನಾಂಕ 19.04.2020 ರ ಕೈಬರಹದ ದೂರನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸುತ್ತಾರೆ. ಸದರಿ ದೂರನ್ನು ನಿಪಿ-**1** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಿಪಿ-1 ಕ್ಕೆ ನಾನು ಯಾಕೆ ಸಹಿ ಹಾಕಿದ್ದೇನೆ ಎಂದು ಗೊತ್ತಿಲ್ಲ, ಪೋಲಿಸರ ಸೂಚನೆಯಂತೆ ಸಹಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಪೋಲಿಸರ ಮುಂದೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪೂರ್ಣಪ್ರಮಾಣದ ಪಾಟೀ ಸವಾಲಿಗೆ ಒಳಪಡಿಸಲು ಸ.ಸ.ಅ. ರವರು ಅನುಮತಿ ಕೋರಿದ್ದು, ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

ಪಾಟೀ ಸವಾಲು : ಸ.ಸ.ಅ. ರವರಿಂದ

ದಿನಾಂಕ 18.04.2020 ರಂದು ಸಂಜೆ 06.00 ಗಂಟೆ ಸಮಯದಲ್ಲಿ ನಾನು ಹಾಲು ತರಲು ಎಂ.ನಾಗೇನಹಳ್ಳಿ ಗ್ರಾಮಕ್ಕೆ ಬರುವಾಗ ದಾರಿಯಲ್ಲಿ 1 ನೇ ಆರೋಪಿ ಮತ್ತು ಚಾಸಾ-

8 ರವರು ಕುರಿಗಳನ್ನು ಹೊಡೆದುಕೊಂಡು ಬರುತ್ತಿದ್ದರು ಎಂದರೆ ಗೊತ್ತಿಲ್ಲ. ಕುರಿಗಳು ದಾರಿಯುದ್ದಕ್ಕೂ ಬರುತ್ತಿದ್ದರಿಂದ ನಾನು ಕುರಿಗಳನ್ನು ಪಕ್ಕಕ್ಕೆ ಹೊಡೆದುಕೊಳ್ಳಿ ಎಂದು ಹೇಳಿದ್ದಕ್ಕೆ 1 ನೇ ಆರೋಪಿಯು ಕಲ್ಲನ್ನು ಹಿಡಿದುಕೊಂಡು ನೀನು ಹೊಸದಾಗಿ ದಾರಿಯನ್ನು ಮಾಡಿಕೊಂಡು ಓಡಾಡಿಕೋ ಎಂದು ನನಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು 1 ನೇ ಆರೋಪಿತನಿಗೆ ನಾನು ನಿನಗೆ ಏನು ಹೇಳಿದೆ ಸ್ವಲ್ಪ ದಾರಿ ಬಿಡಿ ಎಂದು ಹೇಳಿದ್ದಕ್ಕೆ 1 ನೇ ಆರೋಪಿಯು ನನಗೆ ಎಷ್ಟು ಜೋರಾಗಿ ಮಾತನಾಡುತ್ತೀಯಾ ಎಂದು ಅವಾಚ್ಯ ಶಬ್ಧಗಳಿಂದ ಬೈದು, ಕೈಗಳಿಂದ ಮತ್ತು ಕೋಲಿನಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-2 ರವರಿಗೂ ಸಹ 1 ನೇ ಆರೋಪಿಯು ಕೋಲಿನಿಂದ ಎರಡೂ ಕೈಗಳಿಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ, ಇದರಿಂದ ನನಗೆ ಮೂಗೇಟುಗಳಾಗಿದ್ದು, ಚಾಸಾ-2 ರವರ ಎಡಕೈ ಮತ್ತು ಬಲಕೈಗೆ ರಕ್ತಗಾಯ ಮತ್ತು ಮೂಗೇಟುಗಳಾಗಿರುತ್ತವೆ ಎಂದರೆ ಸರಿಯಲ್ಲ.

ಇದೇ ವಿಚಾರವಾಗಿ ದಿನಾಂಕ 19.04.2020 ರಂದು ಬೆಳಿಗ್ಗೆ 6.30 ಗಂಟೆಯ ಸಮಯದಲ್ಲಿ ಎಂ.ನಾಗೇನಹಳ್ಳಿ ಗ್ರಾಮದ ನಾನು ಮತ್ತು ಚಾಸಾ-2 ರಿಂದ 4 ರವರು ನಮ್ಮ ಜಮೀನಿನಲ್ಲಿ ಟಮೋಟೋ ಬಿಡಿಸುತ್ತಿರುವಾಗ, ಆರೋಪಿ ಸಂಖ್ಯೆ 1 ಮತ್ತು 7 ರಿಂದ 16 ರವರು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ನನಗೆ ಮತ್ತು ಚಾಸಾ-4 ರವರಿಗೆ ಕಂಪ್ಲೆಂಟ್ ಕೊಟ್ಟರೆ ಜೀವ ಸಹಿತ ಇರಿಸುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಸೇರಿ ನನಗೆ ಕೈಗಳಿಂದ ಹೊಡೆದು ಮೂಗೇಟು ಉಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕುಡುಗೋಲಿನಿಂದ ನನ್ನ ತಲೆಯ ಹಿಂಭಾಗ ಹೊಡೆದು ರಕ್ತಗಾಯಪಡಿಸಿರುತ್ತಾನೆ ಎಂದರೆ ಸರಿಯಲ್ಲ. 8 ನೇ ಆರೋಪಿತನು ದೊಣ್ಣೆಯಿಂದ ನನ್ನ ಎಡಕೈಗೆ ಮತ್ತು ಬಲಕಾಲಿಗೆ ಹೊಡೆದು ಮೂಗೇಟು ಉಂಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ ಆರೋಪಿತರೆಲ್ಲರೂ ಸೇರಿಕೊಂಡು ಕೈಗಳಿಂದ ಮೈಮೇಲೆ ಹೊಡೆದು ಮೂಗೇಟು ಉಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ 7 ನೇ ಆರೋಪಿತನು ದೊಣ್ಣೆಯಿಂದ ಕೈಗಳಿಗೆ ಮತ್ತು ಹಣೆಯ ಬಳಿ ಹೊಡೆದಿದ್ದು, ಚಾಸಾ-2 ರವರ ಹಣೆಯಲ್ಲಿ ರಕ್ತಗಾಯ, ಎಡಮೊಣಕೈಗೆ ರಕ್ತಗಾಯ ಹಾಗೂ ಬಲಕೈ ಮತ್ತು ಮೈಮೇಲೆ ಮೂಗೇಟುಗಳಾಗಿರುತ್ತವೆ ಎಂದರೆ ಸರಿಯಲ್ಲ

ಆರೋಪಿತರೆಲ್ಲರೂ ಚಾಸಾ-3 ರವರಿಗೂ ಸಹ ಕೈಗಳಿಂದ ಹೊಡೆದು ಮೂಗೇಟು ಉಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. 10 ನೇ ಆರೋಪಿಯು ದೊಣ್ಣೆಯಿಂದ ಚಾಸಾ-3 ರವರ ಎಡಕೈಗೆ ಹೊಡೆದು ಮೂಗೇಟು ಉಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-4 ರವರಿಗೆ ಎಲ್ಲಾ ಆರೋಪಿತರು ಹೊಡೆದಿದ್ದು, 8 ನೇ ಆರೋಪಿತನು ಕುಡುಗೋಲಿನಿಂದ ಚಾಸಾ-4 ರವರ ತಲೆಗೆ ಹೊಡೆದಿದ್ದು, 11 ನೇ ಆರೋಪಿತನು ದೊಣ್ಣೆಯಿಂದ ಚಾಸಾ-4 ರವರ ಬೆನ್ನಿಗ ಹಿಂಭಾಗ ಮತ್ತು ಬಲಕಾಲಿಗೆ ಹೊಡೆದು ರಕ್ತಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ಆರೋಪಿತರೆಲ್ಲರೂ ಸೇರಿಕೊಂಡು ಚಾಸಾ-1 ರಿಂದ 4 ರವರಿಗೆ ಕೈಗಳಿಂದ, ದೊಣ್ಣೆಯಿಂದ, ಕುಡುಗೋಲಿನಿಂದ ಹೊಡೆದು ರಕ್ತಗಾಯಪಡಿಸಿ ಮೂಗೇಟು ಉಂಟುಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 28.06.2020 ರಂದು, "ನಾನು ಮೇಲ್ಕಂಡ ವಿಳಾಸದಲ್ಲಿ - - - - - ಆರೋಪಿತರ ವಿರುದ್ಧ ಕಾನೂನು ಕ್ರಮ ಜರುಗಿಸಲು ಕೋರುತ್ತೇನೆ. ಆರೋಪಿತರನ್ನು ಹಾಗೂ ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ಪುನಃ ನೋಡಿದರೆ ಗುರುತಿಸುತ್ತೇನೆ." ಎಂದು ಮೇಲೆ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿ-**2** ಎಂದು ಗುರುತಿಸಲಾಯಿತು.

ನಾನು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆದ ಕಾರಣ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಇರುವುದಿಲ್ಲ.**

**ಮರು ವಿಚಾರಣೆ : ಇಲ್ಲ.**

ಓದಿ ಹೇಳಿ ಕೇಳಿ ಸರಿ ಇದೆ
ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಗೌರಿಬಿದನೂರು.